# ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ.ಪಿ. ಹೆಚ್. ಪೂಜಾರ್
(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 189 (159)

ಉತ್ತರಿಸುವ ಸಚಿವರು : ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

ಉತ್ತರಿಸಬೇಕಾದ ದಿನಾಂಕ : 16-07-2024

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯವಷ್ಟೇ ಅಲ್ಲದೇ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಕೈಮಗ್ಗ ನೇಯ್ಗೆಯು ಅತ್ಯಂತ ಶ್ರೇಷ್ಠತೆಯನ್ನು ಪಡೆದಿದ್ದು, ಪುರಾತನ ಪಾರಂಪರಿಕ ವೃತ್ತಿ ಕಣ್ಮರೆಯಾಗುತ್ತಿರುವ ಆತಂಕ ನೇಕಾರರಲ್ಲಿ ಹೆಚ್ಚಾಗಿದ್ದು, ನೇಕಾರರಿಗೆ ರಾಜ್ಯ ಸರ್ಕಾರ ಪ್ರಸ್ತುತ ನೀಡುತ್ತಿರುವ ಸೌಲಭ್ಯಗಳಾವುವು; ಅವುಗಳನ್ನು ಕಟ್ಟಕಡೆಯ ನೇಕಾರರಿಗೆ ತಲುಪಿಸಲಾಗಿದೆಯೇ; | 1. ಕೈಮಗ್ಗ ನೇಕಾರರಿಗೆ ರಾಜ್ಯ ಸರ್ಕಾರದಿಂದ ಈ ಕೆಳಕಂಡ ಯೋಜನೆಗಳ ಸೌಲಭ್ಯವನ್ನು ಒದಗಿಸಲಾಗುತ್ತಿದೆ.<br>• ನೇಕಾರರ ಸಮ್ಮಾನ್ ಯೋಜನೆ<br>• ನೇಕಾರರ ಮಕ್ಕಳಿಗೆ ವಿದ್ಯಾರ್ಥಿ ವೇತನ<br>• ಸಹಕಾರ ಬ್ಯಾಂಕ್‌ಗಳು ನೀಡಿದ ಶೂನ್ಯ / 1% ಮತ್ತು 3% ಸಾಲದ ಮೇಲೆ ಬಡ್ಡಿ ಸಹಾಯಧನ ಹಾಗೂ ಶೇ.8 ರ ಬಡ್ಡಿ ಸಹಾಯಧನ<br>• ನಬಾರ್ಡ್ ಪುನರ್ಧನ ಯೋಜನೆಯಡಿ ಬಡ್ಡಿ ಸಹಾಯಧನ<br>• ಕೈಮಗ್ಗ ವಿಕಾಸ ಯೋಜನೆ<br>• ಕೈಮಗ್ಗಗಳಿಗೆ ಮೋಟರೈಸ್ಡ್ ಜಕಾರ್ಡ್ ಸಲಕರಣೆಗಳ ಕಿಟ್ ಒದಗಿಸುವುದು.<br>• ಕಚ್ಚಾ ಮಾಲು ಖರೀದಿ ಮೇಲೆ ಕೈಮಗ್ಗ ಸಹಕಾರ ಸಂಘಗಳಿಗೆ ಪ್ರತಿ ಕೆ.ಜಿ ಗೆ ರೂ.15/- ರ ಸಹಾಯಧನ ನೀಡುವುದು.<br>• ಕೈಮಗ್ಗ ಉತ್ಪನ್ನಗಳ ಮಾರಾಟ ಮೇಲೆ ಶೇ.20 ರಿಬೇಟ್ ಯೋಜನೆ<br>• ಮಿತವ್ಯಯನಿಧಿ ಯೋಜನೆ<br>• ಸಾಮಾನ್ಯ ಸೌಲಭ್ಯ ಕೇಂದ್ರ ನಿರ್ಮಾಣ<br>• ಕೈಮಗ್ಗ ನೇಕಾರ ಸಹಕಾರ ಸಂಘಗಳಿಗೆ ಒಂದಾವರ್ತಿ ಪ್ರೋತ್ಸಾಹಧನ<br>2. ರಾಜ್ಯ ಸರ್ಕಾರ ಪ್ರಸ್ತುತ ನೀಡುತ್ತಿರುವ ಸೌಲಭ್ಯಗಳನ್ನು ಕಟ್ಟಕಡೆಯ ನೇಕಾರರಿಗೆ ತಲುಪಿಸಲಾಗಿದೆ. ಕಳೆದ 3 ವರ್ಷಗಳಲ್ಲಿ ವೈಯಕ್ತಿಕ ಕೈಮಗ್ಗ ನೇಕಾರರಿಗೆ / ಕೈಮಗ್ಗ ಸಹಕಾರ ಸಂಘ / ಸಂಸ್ಥೆಗಳಿಗೆ ನೀಡಲಾದ ಅನುದಾನ ವಿವರಗಳನ್ನು **ಅನುಬಂಧದಲ್ಲಿ** ಒದಗಿಸಿದೆ. |
| ಆ) | ಸರ್ಕಾರದ ನಿರ್ಲಕ್ಷ್ಯದಿಂದ ಹೈಟೆಕ್ ಮಗ್ಗಗಳ ಭರಾಟೆಯಲ್ಲಿ ಅತ್ಯಂತ ಹಿಂದುಳಿದ ಹಾಗೂ ಅನ್ಯ ಉದ್ಯೋಗ ಅರಿಯದ ಕೈಮಗ್ಗ ನೇಕಾರರಿಗೆ ಸರ್ಕಾರ ಆದ್ಯತೆ ನೀಡದಿರುವುದರಿಂದ ಮತ್ತು ಕಚ್ಚಾ ವಸ್ತುಗಳು ರಿಯಾಯಿತಿ ದರದಲ್ಲಿ ಪೂರೈಕೆಯಾಗದ ಕಾರಣ ಕೈಮಗ್ಗದ ಉದ್ಯಮ ಹಿನ್ನೆಡೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕೈಮಗ್ಗ ಉದ್ದಿಮೆಯನ್ನು ಉತ್ತೇಜಿಸಲು ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗುತ್ತಿದೆ.<br>• ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮ (ಎನ್.ಹೆಚ್.ಡಿ.ಸಿ) ವತಿಯಿಂದ ವೈಯಕ್ತಿಕ ಕೈಮಗ್ಗ ನೇಕಾರರು / ಸಂಘ ಸಂಸ್ಥೆಯವರಿಗೆ ಶೇ.15 ರಷ್ಟು ಸಹಾಯಧನದೊಂದಿಗೆ ರೇಷ್ಮೆ/ ಹತ್ತಿ / ಉಣ್ಣೆ/ ಲೇನಿನ್ ನೂಲನ್ನು ನೀಡಲಾಗುತ್ತಿದೆ.<br>• ರಾಜ್ಯ ಸರ್ಕಾರದಿಂದ ಕೈಮಗ್ಗ ನೇಕಾರರ ಸಹಕಾರ ಸಂಘ ಗಳಿಗೆ ಕಚ್ಚಾ ನೂಲು ಖರೀದಿ ಮೇಲೆ ಪ್ರತಿ ಕೆ.ಜಿ. ಗೆ ರೂ.15/- ಸಹಾಯಧನ ನೀಡಲಾಗುತ್ತಿದೆ. |

| | | |
|---|---|---|
| | | • ಕೈಮಗ್ಗ ನೇಕಾರರ ಸಹಕಾರ ಸಂಘಗಳು ಹಾಗೂ ಕೈಮಗ್ಗ ಮಹಾಮಂಡಳಗಳು ತಮ್ಮ ಕೈಮಗ್ಗ ಉತ್ಪನ್ನಗಳ ಮಾರಾಟದ ಮೇಲೆ ಸರ್ಕಾರ ನೀಡುವ ಶೇ.20 ರಿಬೇಟ್ ಅನ್ನು ವರ್ಷದ 365 ದಿನಗಳಿಗೆ (ವರ್ಷ ಪೂರ್ತಿ) ಮಾರಾಟ ಮಾಡಿದ ಕೈಮಗ್ಗ ಉತ್ಪನ್ನಗಳಿಗೆ ಶೇಕಡ 20 ರಿಬೇಟ್ ಅನ್ನು ರಾಜ್ಯ ಸರ್ಕಾರದ ವತಿಯಿಂದ ಮರು ಪಾವತಿಸಲಾಗುತ್ತಿದೆ.<br>• ನೇಕಾರರ ಸಹಕಾರ ಸಂಘಗಳು / ಸಹಕಾರ ಬ್ಯಾಂಕ್‌ಗಳಿಂದ ನೇಕಾರರಿಗೆ ನೇಕಾರಿಕೆ ಮತ್ತು ನೇಕಾರಿಕೆಗೆ ಸಂಬಂಧಿಸಿದ ಉದ್ದೇಶಗಳಿಗಾಗಿ ಶೂನ್ಯ / ಶೇ.1ರ ಬಡ್ಡಿ ದರದಲ್ಲಿ ರೂ.2.00 ಲಕ್ಷಗಳವರೆಗೆ ಹಾಗೂ ಶೇ.3ರ ಬಡ್ಡಿ ದರದಲ್ಲಿ ರೂ.2.00 ಲಕ್ಷಗಳಿಂದ ರೂ.5.00 ಲಕ್ಷಗಳವರೆಗೆ ನೀಡುವ ಸಾಲಕ್ಕೆ ಬಡ್ಡಿ ಸಹಾಯಧನ ನೀಡಲಾಗುತ್ತಿದೆ.<br>• ನೇಕಾರರ ಸಹಕಾರ ಸಂಘಗಳು / ಸಹಕಾರ / ವಾಣಿಜ್ಯ ಬ್ಯಾಂಕ್ ಗಳಿಂದ ನೇಕಾರರು ಪಡೆಯುವ ಸಾಲದ ಮೇಲೆ ಶೇ.8ರಷ್ಟು ಬಡ್ಡಿ ಸಹಾಯಧನವನ್ನು ಮರುಸಂದಾಯ ಮಾಡಲಾಗುವುದು. |
| ಇ) | ರಾಜ್ಯದಲ್ಲಿ ಗುಡಿ ಕೈಗಾರಿಕೆಗಳ ಪೈಕಿ ಬರುವ ಕೈಮಗ್ಗ ನೇಕಾರರನ್ನು ಹಾಗೂ ಅವರಿಗೆ ಸಹಾಯ ಮಾಡುವ ಉಪ ಕಸುಬುದಾರರನ್ನು ಕಾರ್ಮಿಕರೆಂದು ಪರಿಗಣಿಸಿ, ಕಟ್ಟಡ ಕಾರ್ಮಿಕ ಮಾದರಿಯ ಕಾರ್ಮಿಕ ಸೌಲಭ್ಯಗಳನ್ನು ಒದಗಿಸಬೇಕೆಂದು ನೇಕಾರರು ಹಲವಾರು ವರ್ಷಗಳಿಂದ ಬೇಡಿಕೆ ಸಲ್ಲಿಕೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು; (ಮಾಹಿತಿ ನೀಡುವುದು) | ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಮೂಲಕ ನೇಕಾರ ವೃತ್ತಿಯಲ್ಲಿ ತೊಡಗಿರುವ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಹಾಗೂ ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಲು ನೇಕಾರರನ್ನೊಳಗೊಂಡ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ನೀಡಲು ಇಲಾಖೆಯಲ್ಲಿ / ಲಭ್ಯವಿರುವ ನೇಕಾರರ ಮಾಹಿತಿಯನ್ನೊಳಗೊಂಡ ದತ್ತಾಂಶವನ್ನು ಒದಗಿಸುವಂತೆ ಆಯುಕ್ತರು, ಕಾರ್ಮಿಕ ಇಲಾಖೆ ಇವರು ತಿಳಿಸಿರುತ್ತಾರೆ. ಅದರಂತೆ, ಕೈಮಗ್ಗ ಹಾಗೂ ವಿದ್ಯುತ್ ಮಗ್ಗ ನೇಕಾರರ ಮಾಹಿತಿಯನ್ನೊಳಗೊಂಡ ದತ್ತಾಂಶವನ್ನು ನೀಡಲಾಗಿದೆ. |
| ಈ) | ಕೈಮಗ್ಗ ನೇಕಾರಿಕೆಯಲ್ಲಿ ತೊಡಗಿರುವ ವೃತ್ತಿ ಭಾಂದವರು ನೂಲು ಎಳೆ ನೇಯ್ಗೆಯಿಂದ ಸೂಕ್ಷ್ಮ ಕೆಲಸದಿಂದಾಗಿ ವೃದ್ಧಾಪ್ಯದಲ್ಲಿ ಕಾಡುವ ಅನೇಕ ರೋಗಗಳಿಗೆ ಉಪಚರಿಸುವಂತಹ ಕಾರ್ಯಕ್ರಮಗಳನ್ನು ಸರ್ಕಾರ ಹಮ್ಮಿ ಕೊಂಡಿದೆಯೇ; ಹಾಗಿದ್ದಲ್ಲಿ, ಅವು ಯಾವುವು? (ಜಿಲ್ಲಾವಾರು ಮಾಹಿತಿ ನೀಡುವುದು) | ಪ್ರಸ್ತುತ ಇಲಾಖೆಯಲ್ಲಿ ಇಂತಹ ಯಾವುದೇ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದಿಲ್ಲ. |

**ಸಂಖ್ಯೆ: CI 125 JAKE 2024**

(ಶಿವಾನಂದ ಎಸ್. ಪಾಟೀಲ)
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

# ಅನುಬಂಧ

**ಮಾನ್ಯ ಕರ್ನಾಟಕ ವಿಧಾನ ಪರಿಷತ್ತಿ ಸದಸ್ಯರಾದ ಶ್ರೀ. ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 159 ಕ್ಕೆ ಮಾಹಿತಿ**

**ಕಳೆದ 3 ವರ್ಷಗಳಲ್ಲಿ ವೈಯಕ್ತಿಕ ಕೈಮಗ್ಗ ನೇಕಾರರಿಗೆ / ಕೈಮಗ್ಗ ಸಹಕಾರ ಸಂಘ / ಸಂಸ್ಥೆಗಳಿಗೆ ನೀಡಲಾದ ಅನುದಾನ ವಿವರ**

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ಯೋಜನೆ / ಉಪಯೋಜನೆ | 2021-22 | | 2022-23 | | 2023-24 | |
|---|---|---|---|---|---|---|---|
| | | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ |
| 1 | ನೇಕಾರ ಸಮ್ಮಾನ್ ಯೋಜನೆ | 990.88 | 49544 | 2293.35 | 45867 | 2220.30 | 44406 |
| 2 | ಮೃತ ನೇಕಾರರ ಅಂತ್ಯ ಸಂಸ್ಕಾರ ವೆಚ್ಚ ಮರುಪಾವತಿ | 6.90 | 138 | 3.20 | 64 | 2.35 | 47 |
| 3 | ಕೈಮಗ್ಗ ನೇಕಾರರಿಗೆ ತರಬೇತಿ (ಸ್ಟೈಫಂಡ್) | 21.44 | 89 | 0.00 | 0 | 0 | 0 |
| 4 | ವಿಮಾ ಯೋಜನೆ | 0.00 | 0 | 39.34 | 24187 | 23.08 | 9700 |
| 5 | ಕೈಮಗ್ಗ ಉತ್ಪನ್ನಗಳಿಗೆ ಮಾರುಕಟ್ಟೆ ಸಹಾಯ (20% ರಿಬೇಟ್) | 450.00 | 77 | 500.00 | 82 | 719.85 | 91 |
| 6 | ಐಳಗೆ ನಿಧಿ ಯೋಜನೆ | 73.04 | 74 | 49.18 | 62 | 73.95 | 86 |
| 7 | ಐಳಗೆ ನಿಧಿ ಮೇಲಿನ ಬಡ್ಡಿ | 126.96 | 44 | 50.82 | 15 | 197.10 | 48 |
| 8 | ಕೆಹೆಚ್‌ಟಿಐ, ಗದಗ & ಎಹೆಚ್‌ಟಿಐ, ಜಮಖಂಡಿ ಸಂಸ್ಥೆಗಳಿಗೆ ಆವರ್ತನ ವೆಚ್ಚ | 20.00 | 1 | 70.00 | 1 | 70.00 | 1 |
| 9 | ಕೈಮಗ್ಗ ವಿಕಾಸ ಯೋಜನೆ | 1.85 | 9 | 2.05 | 11 | 0.00 | 0 |
| 10 | ಕಾವೇರಿ ಹ್ಯಾಂಡಲೂಮ್ಸ್‌ನ ಸಿಬ್ಬಂದಿ ವೇತನ ಮತ್ತು ಇತರೆ ಕಚೇರಿ ವೆಚ್ಚ ನೇಕಾರರ ಉತ್ಪನ್ನಗಳ ಮಾರಾಟಕ್ಕಾಗಿ ಮಾರುಕಟ್ಟೆ ಪ್ರೋತ್ಸಾಹನ | 50.00 | 1 | 50.00 | 1 | 50.00 | 1 |
| 11 | ಕೈಮಗ್ಗ ಮತ್ತು ವಿದ್ಯುತ್‌ಮಗ್ಗಗಳ ನೇಕಾರರಿಗೆ ಸಹಕಾರ ಬ್ಯಾಂಕ್‌ಗಳು ಮತ್ತು ಸಂಘಗಳ ಮೂಲಕ ಶೇ.1 ರ ಬಡ್ಡಿ ದರದಲ್ಲಿ ರೂ.2.00 ಲಕ್ಷಗಳ ವರೆಗೆ ಸಾಲ ಮತ್ತು ಶೇ.3 ರ ಬಡ್ಡಿದರದಲ್ಲಿ ರೂ.2.00 ಲಕ್ಷಗಳಿಂದ ರೂ.5.00 ಲಕ್ಷಗಳ ವರೆಗೆ ಸಾಲ ಸೌಲಭ್ಯ | 134.76 | 26 | 199.89 | 38 | 193.31 | 42 |
| 12 | ಕೈಮಗ್ಗಗಳಿಗೆ ಎಲೆಕ್ಟ್ರಾನಿಕ್ ಜಕಾರ್ಡ್ ಹಾಗೂ ನ್ಯೂಮ್ಯಾಟಿಕ್ ಸೌಲಭ್ಯಗಳನ್ನು ಒದಗಿಸುವುದು. | 0.45 | 6 | 0.00 | 0 | 0.00 | 0 |
| 13 | ಕೈಮಗ್ಗ ನೇಕಾರರ ಸಹಕಾರ ಸಂಘಗಳಿಗೆ ಒಂದಾವರ್ತಿ ಪ್ರೋತ್ಸಾಹಧನ ನೀಡುವುದು. | | | 0.00 | 0 | 15.00 | 3 |
| 14 | ಕಚ್ಚಾ ನೂಲು ಖರೀದಿಗೆ ಪ್ರತಿ ಕೆಜಿಗೆ ರೂ.15/- ರ ಸಹಾಯಧನ | 0.87 | 9 | 15.04 | 32 | 4.83 | 32 |
| 15 | ಉಣ್ಣೆ ವಲಯ ಪುನಃಶ್ಚೇತನ ಮತ್ತು ಬಲವರ್ಧನೆ ಯೋಜನೆಯಡಿ ಸಹಾಯಧನ | 112.39 | 3 | 40.84 | 2 | 0 | 0 |
| 17 | ಕೈಮಗ್ಗ ವಲಯದ ಇತರೆ ಅಭಿವೃದ್ಧಿ ಚಟುವಟಿಕೆಗಳು | 30.50 | 5 | 99.22 | 6 | 31.49 | 17 |
| 18 | ನೇಕಾರರ ಮಕ್ಕಳಿಗೆ ವಿದ್ಯಾರ್ಥಿ ವೇತನ | 0.00 | 0 | 164.49 | 3669 | 223.8 | 4478 |
| 19 | ಶೇ.1% & 3% ರ ದರದಲ್ಲಿ ಬಡ್ಡಿ ಸಹಾಯಧನ (ವಿಶೇಷ ಪ್ರಕರಣಗಳಿಗೆ ಸರ್ಕಾರದಿಂದ ಅನುಮೋದನೆ ನೀಡಲಾಗಿದೆ.) | 0.00 | 0 | 0.13 | 1 | 0 | 0 |
| 20 | ಪವಿತ್ರ ವಸ್ತ್ರ ಯೋಜನೆ | 0.00 | 0 | 0.00 | 0 | 33.00 | 1 |
| | ಒಟ್ಟು | 2020.04 | 50026 | 3577.55 | 74038 | 3858.06 | 58953 |

K. Jyothi 11/7/2024

ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ
ನಿರ್ದೇಶಕರು ಕೈಮಗ್ಗ ಮತ್ತು ಜವಳಿ